# ನಂಬಿ ನಾರಾಯಣನ್ ಮುಕ್ತ ಮುಕ್ತ ಮುಕ್ತ...

**ರಾಕೆಟ್ ಮತ್ತು ಉಪಗ್ರಹ ಉಡಾವಣೆಯ 'ಪರೀಕ್ಷಾರ್ಥ ಹಾರಾಟದ ದತ್ತಾಂಶ'ಗಳನ್ನು ಮಾರಿಕೊಂಡಿದ್ದಾರೆ ಎನ್ನುವ ಆರೋಪದ ಮಸಿ ಬಳಿಸಿಕೊಂಡಿದ್ದ ವಿಜ್ಞಾನಿ ನಂಬಿ ನಾರಾಯಣನ್ ಅವರಿಗೆ ಕೇರಳ ಸರ್ಕಾರದಿಂದ 1.3 ಕೋಟಿ ರೂಪಾಯಿ ಪರಿಹಾರ ದೊರೆತಿದೆ. ಆರೋಪ ಮುಕ್ತವಾಗಿ ಪರಿಹಾರ ದೊರಕಿರುವುದೇನೊ ಸರಿ; ಆದರೆ, ಇಪ್ಪತ್ತೈದು ವರ್ಷಗಳ ಕಾಲ ದೇಶದ್ರೋಹದ ಆರೋಪ ಎದುರಿಸಿ ಅನುಭವಿಸಿದ ಅವರ ನೋವುಗಳಿಗೆ ಪರಿಹಾರ ಕೊಡಲು ಸಾಧ್ಯವೇ?**

■ ಡಿ.ಎಂ. ಘನಶ್ಯಾಮ



ಕೇರಳ ಸಚಿವ ಸಂಪುಟ ಇಸ್ರೊ ವಿಜ್ಞಾನಿ ನಂಬಿ ನಾರಾಯಣನ್ ಅವರಿಗೆ 1.3 ಕೋಟಿ ರೂಪಾಯಿ ಪರಿಹಾರ ನೀಡಲು ಕಳೆದ ಡಿ.27ರಂದು ತಾತ್ವಿಕ ಒಪ್ಪಿಗೆ ನೀಡಿದೆ. ಆ ಮೂಲಕ ಈ ಶತಮಾನ ಶುರುವಾಗುವ ಮೊದಲು ಆರಂಭವಾದ ಅನ್ಯಾಯ ಪರಂಪರೆಗೆ ಎರಡನೇ ದಶಕ ಮುಗಿಯುವ ಮೊದಲು ಇತಿಶ್ರೀ ಹಾಕುವ ಪ್ರಯತ್ನಕ್ಕೆ ಅಸ್ತು ಎಂದಿದೆ. ಅಷ್ಟು ಮಾತ್ರವೇ ಅಲ್ಲ, ಕೇರಳ ಸಚಿವ ಸಂಪುಟದ ಈ ನಿರ್ಧಾರ ದೇಶದ ಅಪರಾಧ ಶಾಸ್ತ್ರ ಮತ್ತು ಕಾನೂನು ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದಕ್ಕೆ ಮುನ್ನುಡಿ ಬರೆಯುವ ಪ್ರಯತ್ನದಂತೆ ಇದೆ.

ನಂಬಿಕೆದ್ರೋಹಿ, ದೇಶದ್ರೋಹಿ ಎಂಬೆಲ್ಲಾ ಬಿರುದುಗಳ ಭಾರಕ್ಕೆ ಹೈರಾಣಾಗಿ ನ್ಯಾಯಕ್ಕಾಗಿ ಹೋರಾಡಿದ ವಿಜ್ಞಾನಿಗೆ ಪರಿಹಾರದ ಮೊತ್ತಕ್ಕಿಂತಲೂ ತನ್ನ ಮೇಲೆ ಸಲ್ಲದ ಆರೋಪ ಹೊರಿಸಿದ ಸರ್ಕಾರ ಈಗ ಎಲ್ಲ ಆರೋಪಗಳನ್ನು ಹಿಂಪಡೆದು, ಮಾಡಿದ ತಪ್ಪು ಒಪ್ಪಿಕೊಂಡು, ದೊಡ್ಡಮೊತ್ತದ ಪರಿಹಾರ ನೀಡಲು ಮುಂದಾಗಿರುವುದು ನೆಮ್ಮದಿ ತಂದಿರಬಹುದು.

ನಂಬಿ ನಾರಾಯಣನ್ ಅವರ ಆತ್ಮಚರಿತ್ರೆಯ ಹೆಸರು 'ಓರ್ಮಗಳುಡೆ ಭ್ರಮಣಪಥಂ' (ನೆನಪಿನ ಸುರುಳಿ). 23ನೇ ಅಕ್ಟೋಬರ್ 2017ರಲ್ಲಿ ಬಿಡುಗಡೆಯಾದ ಈ ಪುಸ್ತಕದಲ್ಲಿ ನಾರಾಯಣನ್ ತಮ್ಮ ಬದುಕು ಸಾಗಿ ಬಂದ ಹಾದಿಯ ಜೊತೆಜೊತೆಗೆ ದೇಶದ ಹಿತ ಬಯಸಿದ ವಿಜ್ಞಾನಿಯೊಬ್ಬ ಎದುರಿಸಿದ ಸಂದಿಗ್ಧ–ಸಂಕಷ್ಟಗಳನ್ನೂ ಕಟ್ಟಿಕೊಟ್ಟಿದ್ದಾರೆ. ಇದೀಗ ಅವರ ಬದುಕನ್ನೇ ಆಧರಿಸಿದ ಬಯೊಪಿಕ್ 'ರಾಕೆಟರಿ – ದಿ ನಂಬಿ ಎಫೆಕ್ಟ್' ತೆರೆಗೆ ಬರುವ ಸಿದ್ಧತೆಯಲ್ಲಿದೆ.

ಯಾರೀ ನಂಬಿ ನಾರಾಯಣನ್? ಈತ ದೇಶಭಕ್ತನೋ? ದೇಶದ್ರೋಹಿಯೋ? ವಾಮಮಾರ್ಗದಿಂದ ಖ್ಯಾತಿಗಳಿಸಿದ ಕಳ್ಳ ವಿಜ್ಞಾನಿಯೋ? ಪ್ರತಿಭೆ–ಪರಿಶ್ರಮದಿಂದ ದೇಶದಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ವೇಗವರ್ಧಕವಾಗಿ ಕೆಲಸ ಮಾಡಿದ ಸಾಧಕನೋ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮುಂದಿನ ಸಾಲುಗಳಲ್ಲಿದೆ.

## ಸಾರಾಭಾಯ್ ಕಣ್ಣಿಗೆ ಬಿದ್ದ ಸೂಕ್ಷ್ಮಮತಿ

ತಮಿಳುನಾಡಿನ ನಾಗರ್‌ಕೊಯಿಲ್ (ಜನನ: ಡಿಸೆಂಬರ್ 12, 1941) ನಂಬಿ ನಾರಾಯಣನ್ ಅವರ ಹುಟ್ಟೂರು. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿದ ನಂಬಿ, 1966ರಲ್ಲಿ ಮೊದಲ ಬಾರಿಗೆ ತಿರುವನಂತಪುರದಲ್ಲಿ ಅಂದಿನ ಇಸ್ರೊ ಅಧ್ಯಕ್ಷ ವಿಕ್ರಮ್ ಸಾರಾಭಾಯ್ ಅವರನ್ನು ಭೇಟಿಯಾಗಿದ್ದರು. ಅವರ ಬಾಹ್ಯಾಕಾಶದ ಕನಸಿಗೆ ಬೀಜ ಬಿತ್ತಿದ್ದ ಇಸ್ರೊ ಮತ್ತು ತಿರುವನಂತಪುರ ಅವರ ಬದುಕಿನೊಳಗೆ ಪ್ರವೇಶಿಸಿದ್ದು ಹೀಗೆ. ಆದರೆ